# ತಲ್ಲೂರ ರಾಯನಗೌಡ ಪಾಟೀಲ ಸ್ಮಾರಕ ಸಂಸ್ಥೆಯ ದತ್ತಿ




ಧಾರವಾಡ : ಕ್ರಿ.ಶ. ೯ ನೇಯ ಶತಮಾನದಲ್ಲಿಯ ಶ್ರೀವಿಜಯನ ಅಲಂಕಾರ ಗ್ರಂಥ 'ಕವಿರಾಜಮಾರ್ಗದಲ್ಲಿ' ವ್ಯಕ್ತವಾದ ಕನ್ನಡಿಗರ ಹಿರಿಮೆ-ಗರಿಮೆ ಉತ್ಕೃಷ್ಟವಾದದ್ದು, ಪ್ರತಿಯೊಬ್ಬ ಕನ್ನಡಿಗನೂ ಯಾರ ಜೊತೆ ಹೇಗೆ ಮಾತನಾಡಬೇಕು, ಬೇರೆಯವರು ಮಾತನಾಡಿದ್ದನ್ನು ಪರಸ್ಪರ ಹೇಗೆ ಅರ್ಥ ಮಾಡಿಕೊಳ್ಳಬೇಕು ಎಂಬುದನ್ನು ಚೆನ್ನಾಗಿ ಬಲ್ಲವರಾಗಿದ್ದರು ಎಂದು ಜೆ.ಎಸ್.ಎಸ್. ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಜಿನದತ್ತ ಅ. ಹಡಗಲಿ ಹೇಳಿದರು. ಅವರು ಕರ್ನಾಟಕ ವಿದ್ಯಾವರ್ಧಕ ಸಂಘವು ದಿನಾಂಕ ೩೦-೯-೨೦೧೮ ರಂದು ತಲ್ಲೂರ ರಾಯನಗೌಡ ಪಾಟೀಲ ಸ್ಮಾರಕ ಸಂಸ್ಥೆಯ ದತ್ತಿ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಅವರು **'ಕರ್ನಾಟಕ ಏಕೀಕರಣ : ನೆನಪು'** ವಿಷಯ ಕುರಿತು ಉಪನ್ಯಾಸ ನೀಡುತ್ತಾ ಮಾತನಾಡುತ್ತಿದ್ದರು.

ಓದಲು, ಬರೆಯಲು ಬಾರದೇ ಇದ್ದರೂ ಸಮೃದ್ಧ ಕಾವ್ಯ ರಚಿಸಬಲ್ಲ ಜಾಣತನ, ಚಾಣಾಕ್ಷತನವನ್ನು ಕನ್ನಡಿಗರು ಮೈಗೂಡಿಸಿಕೊಂಡವರಾಗಿದ್ದರು. ಇದಕ್ಕೆ ಸಮೃದ್ಧವಾದ ಬೆಳೆದು ನಿಂತಿರುವ ಜಾನಪದ ಸಾಹಿತ್ಯವೇ ಸಾಕ್ಷಿಯಾಗಿದೆ ಎಂದರು. ಅನೇಕ ರಾಜಮನೆತನಗಳ ಹಿನ್ನೆಲೆಯಲ್ಲಿ ೧೯ ತುಂಡಾಗಿದ್ದ ಕರ್ನಾಟಕ ಏಕೀಕರಣದ ಹೋರಾಟಕ್ಕೆ ಧಾರವಾಡವೇ ಪ್ರಮುಖ ನೆಲೆಯಾಗಿತ್ತು. ಅನೇಕ ಜನ ಮಹನೀಯರ ಹೋರಾಟದ ಪ್ರತಿಫಲವಾಗಿ ೧೯೫೬ ನವಂಬರ ೧ ರಂದು ಕನ್ನಡ ರಾಜ್ಯ ಉದಯವಾಯಿತು. ಮುಂದೆ ೧೯೭೩ ನವಂಬರ ೧ ರಂದು ಆಗಿನ ಮುಖ್ಯಮಂತ್ರಿಯಾಗಿದ್ದ ಡಿ. ದೇವರಾಜ ಅರಸರು ಮೈಸೂರು ರಾಜ್ಯವನ್ನು ಕರ್ನಾಟಕ ಎಂದು ಘೋಷಿಸಿದರು ಎಂಬುದರ ಬಗ್ಗೆ ಏಕೀಕರಣದ ಹಿನ್ನೆಲೆಯನ್ನು ವಿವರಿಸಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕ.ವಿ.ವ.ಸಂಘದ ಅಧ್ಯಕ್ಷ ನಾಡೋಜ ಡಾ. ಪಾಟೀಲ ಪುಟ್ಟಪ್ಪ ಅವರು ಮಾತನಾಡಿ, ಸ್ವಾತಂತ್ರ್ಯ ಹೋರಾಟ ಹಾಗೂ ಕರ್ನಾಟಕ ಏಕೀಕರಣ ಹೋರಾಟ ಎರಡರಲ್ಲೂ ನಿಸ್ವಾರ್ಥ ಭಾವದಿಂದ ಹೋರಾಡಿದ ತಲ್ಲೂರ ರಾಯನಗೌಡರ ಶ್ರಮ ಅಪಾರವಾದದ್ದು. ಅವರು ಕೇವಲ ಹೋರಾಟಗಾರರಾಗಿರಲಿಲ್ಲ. ಜಾನಪದ ವಿದ್ವಾಂಸ, ಸಂಶೋಧಕ, ಅಂಕಣಕಾರ, ಕುಟುಂಬ ವತ್ಸಲರಾಗಿದ್ದರು. ಅವರು ಹಲವಾರು ಕೃತಿಗಳನ್ನು ನೀಡಿ ಕನ್ನಡ ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದವರು. ಅವರ ಸ್ಮರಣೆ ಶ್ಲಾಘನೀಯವಾದದ್ದು ಎಂದರು.

ಸಮಾರಂಭದಲ್ಲಿ ತಲ್ಲೂರ ರಾಯನಗೌಡ ಪಾಟೀಲ ಅವರ ಭಾವಚಿತ್ರಕ್ಕೆ ಪುಷ್ಪನಮನದೊಂದಿಗೆ ಗೌರವ ಸಲ್ಲಿಸಲಾಯಿತು. ವೇದಿಕೆಯಲ್ಲಿ ಡಾ. ಪಿ. ಎಸ್. ಶಂಕರ, ದತ್ತಿ ದಾನಿಗಳಾದ ಶ್ರೀಮತಿ ದೇವಿಕಾರಾಣಿ ಪಾಟೀಲ ಉಪಸ್ಥಿತರಿದ್ದರು.

ಸಂಘದ ಕೋಶಾಧ್ಯಕ್ಷ ಕೃಷ್ಣ ಜೋಶಿ ಸ್ವಾಗತಿಸಿದರು. ಕಾರ್ಯಕಾರಿ ಸಮಿತಿ ಸದಸ್ಯರಾದ ಶಂಕರ ಕುಂಬಿ ನಿರೂಪಿಸಿದರು. ಮೋಹನ ನಾಗಮ್ಮನವರ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹಕಾರ್ಯದರ್ಶಿ ಸದಾನಂದ ಶಿವಳ್ಳಿ ವಂದಿಸಿದರು. ಕಾರ್ಯಕ್ರಮದಲ್ಲಿ ಸಂಘದ ಉಪಾಧ್ಯಕ್ಷ ನಿಂಗಣ್ಣ ಕುಂಟಿ (ಇಟಗಿ), ಗೌರವ ಉಪಾಧ್ಯಕ್ಷರಾದ ಎಂ.ಬಿ. ಕಟ್ಟಿ, ಡಾ.ಇಸಬೆಲ್ಲಾ ಝೇವಿಯರ್, ಕಾರ್ಯಾಧ್ಯಕ್ಷರಾದ ಶಿವಣ್ಣ ಬೆಲ್ಲದ, ಪ್ರಧಾನ ಕಾರ್ಯದರ್ಶಿ ಪ್ರಕಾಶ ಎಸ್. ಉಡಿಕೇರಿ ಹಾಗೂ ವೀರಣ್ಣ ಒಡ್ಡೀನ ಸೇರಿದಂತೆ ಅನೇಕರ ಭಾಗವಹಿಸಿದ್ದರು.

**ವರದಿ : ಮೋಹನ ನಾಗಮ್ಮನವರ**
ಕಾರ್ಯಕಾರಿ ಸಮಿತಿ ಸದಸ್ಯರು